# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ :- 19/12/2020 ರಂದು ವಾರ್ಡ್-32ರ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿ**

**ಸಭೆಗೆ ಹಾಜರಿದ್ದ ಅಧಿಕಾರಿಗಳು :-**

1. ಶ್ರೀ. ಮಹಮ್ಮದ್ ಅಲಿ, ನೋಡಲ್ ಅಧಿಕಾರಿ (ಗೈರು ಹಾಜರು)
2. ಶ್ರೀ. ಬಸವರಾಜು, ವಾರ್ಡ್ ಸಹಾಯಕ ಅಭಿಯಂತರರು (ಸದಸ್ಯ ಕಾರ್ಯದರ್ಶಿ)
3. ಶ್ರೀ. ಧನರಾಜ್ ಸಹಾಯಕ ಅಭಿಯಂತರರು ಬೆಸ್ಕಾಂ.
4. ಶ್ರೀ. ದಯಾನಂದ, ಕಿರಿಯ ಆರೋಗ್ಯ ಪರೀವಿಕ್ಷಕರು.
5. ಶ್ರೀ. ಸ್ವಾಮಿ ಸ್ಟ್ರೀಟ್ ಲೈಟ್ ಸೂಪರ್‌ವೈಸರ್

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯ ಕಾರ್ಯದರ್ಶಿ ವಾರ್ಡ್-32 ರವರು ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು. ವಾರ್ಡ್-32 ರ ವಾರ್ಡ್ ಸಮಿತಿ ಸಭೆಯನ್ನು ಎಲ್. ಆರ್. ಬಂಡೆ ವಾರ್ಡ್ ಕಛೇರಿಯಲ್ಲಿ ನಡೆಸಲಾಯಿತು. ಸದಸ್ಯ ಕಾರ್ಯದರ್ಶಿರವರು ಸಭೆಯಲ್ಲಿ ಕಾರ್ಯಸೂಚಿಗಳು ಹಾಗೂ ಸಾರ್ವಜನಿಕರ ಕುಂದು ಕೊರತೆಗಳು ಅಧಿಕಾರಿಗಳ ಜೋತೆಯಲ್ಲಿ ಚರ್ಚಿಸಿದರು. ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳವ ಬಗ್ಗೆ ಸಂಬಂದಪಟ್ಟ ಅಧಿಕಾರಿ ಹಾಗೂ ನೌಕರರುಗಳಿಗೆ ತಿಳಿಸಿರುತ್ತಾರೆ.

❖ **ಕಾರ್ಯಸೂಚಿಗಳು :**

1. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ನಂ:10096/2020 (GIM-PIL) ರ ನಿರ್ದೇಶನದಲ್ಲಿ ತಿಳಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ Begging and Hawking Childern Identification Survey ಕೈಗೋಳ್ಳಬೇಕಾಗಿದ್ದು ವಾರ್ಡ್‌ಗಳಲ್ಲಿ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಕೊಳಗೇರಿಗಳಲ್ಲಿ (ಸ್ಲಂ), ಬಸ್ ಮತ್ತು ರೈಲ್ವೆನಿಲ್ದಾಣ ಹಾಗೂ ಇತರೆ ಸ್ಥಳಗಳನ್ನು ಸ್ಥಳಿಯ ನಿವಾಸಿ ಕಲ್ಯಾಣ ಸಂಘ ( Residential Welfare Association ) ಹಾಗೂ ಸ್ವಯಂ ಸೇವಾ ಸಂಘಗಳ ( NGO ) ಮುಖೇನ ಗುರುತಿಸಿ ನಿಗಧಿತ ನಮುನೆಯಲ್ಲಿ ಮಾಹಿತಿಯನ್ನು ಕಲೆಹಾಕಲು ಕ್ರಮ ವಹಿಸುವುದು.
2. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ನಂ 15768/2013 ರ ಹಿನ್ನಲೆಯಲ್ಲಿ ಹೊರಡಿಸಲಾದ ಸರ್ಕಾರದ ಆದೇಶದಲ್ಲಿ 2020-21 ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಗುರುತಿಸಿ, ಶಾಲೆಗೆ ಹಾಜರಾಗಲು ನಗರ ಸ್ಥಳೀಯ ಸಂಸ್ಥೆಗಳು (ಬಿ.ಬಿ.ಎಂ.ಪಿ ಒಳಗೊಂಡಂತೆ) ವಾರ್ಡ್ ಸದಸ್ಯರನ್ನು ಅದರ ಅಧ್ಯಕ್ಷರನ್ನಾಗಿ ವಾರ್ಡ್ ಕಮಿಟಿಯನ್ನು ರಚಿಸತಕ್ಕದ್ದು.ಆ ವಾರ್ಡ್ ವ್ಯಾಪ್ತಿಯ ಮುಖ್ಯೋಪಾಧ್ಯಾಯರು, ಅಂಗನವಾಡಿ ಕಾರ್ಯಕರ್ತರು ಎನ್.ಜಿ.ಓ ಗಳನ್ನು ಸದಸ್ಯರನ್ನಾಗಿ ಮಾಡಿಕೊಂಡು ಕಾಲಕಾಲಕ್ಕೆ ಸದರಿ ಸಮಿತಿಯು ಕಾಲಕಾಲಕ್ಕೆ ತಪಾಸಣೆ ನಡೆಸಿ, ಶಾಲೆಯಿಂದ ವಂಚಿತರಾದ ಹಾಗೂ ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಬಸ್ ನಿಲ್ದಾಣ ರೈಲ್ವೇ ನಿಲ್ದಾಣ ಕಾರ್ಖಾನೆಗಳು ಮಾರುಕಟ್ಟೆ ಮುಂತಾದ ಸ್ಥಳಗಳಲ್ಲಿ ಮಕ್ಕಳನ್ನು ಗುರುತಿಸಿ ಸಂಬಂದಿಸಿದ ಇಲಾಖೆಗಳಾದ ಮಕ್ಕಳ ಕಲ್ಯಾಣಾಧಿಕಾರಿ ( CDPO ) ಕಾರ್ಮಿಕ ಇಲಾಖೆ ಹಾಗೂ ಶಿಕ್ಷಣ

ಇಲಾಖೆಯ ಅಧಿಕಾರಿಗಳಿಗೆ ತಿಳಿಸುವ ಬಗ್ಗೆ ಕ್ರಮ ವಹಿಸುವುದುಎಂಬುದಾಗಿ ಇದ್ದು, ಇದಕ್ಕೆ ಪ್ರತ್ಯೇಕವಾದ ಸಿದ್ದಪಡಿಸಲಾಗಿದ್ದು ಸಧದಲ್ಲೇ ಈ ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ ಪೂರ್ವಸಿದ್ದತೆಗಳನ್ನು ಮಾಡಿಕೊಳ್ಳತಕ್ಕದ್ದು ಹಾಗೂ ಸಭೆಯಲ್ಲಿ ಚರ್ಚಿಸುವುದು.

3. ವಾರ್ಡಿನ ವ್ಯಾಪ್ತಿಯಲ್ಲಿ ಪ್ರದೇಶದಲ್ಲಿ ರಾತ್ರಿಹೊತ್ತು ತಪಾಸಣೆ ಕೈಗೊಂಡು ಬೀದಿ ಬದಿ ಮಲುಗುವವರ ನಿರಾಶ್ರಿತರ ಸಂಖ್ಯೆಯನ್ನು ಕಲೆಹಾಕಲು ಅಗತ್ಯ ಕ್ರಮಹಿಸುವುದು.

**ಕ್ರಮ : ಈ ಮೇಲೆ ಸೂಚಿಸಿರುವಂತಹ ಕಾರ್ಯಸೂಚಿಗಳನ್ನು ಕೂಡಲೆ ಕಾರ್ಯಚರಣೆ ತರಬೇಕಾಗಿ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸಾರ್ವಜನಿಕರು ಹಾಗೂ ಅಧಿಕಾರಿಗಳಿಗೆ ಸೂಚಿಸಿದರು ಹಾಗೂ ಎಲ್ಲಾ ಸಾರ್ವಜನಿಕರು ಹಾಗೂ ಅಧಿಕಾರಿಗಳು ಸಕಾರಾತ್ಮಕ ಪ್ರತಿಕ್ರಯೆ ನೀಡಿದರು.**

➢ **ಕಾಮಗಾರಿ ಇಲಾಖೆಗೆ ಸಂಬಂದಿಸಿರುವುದು**

1. ವಾರ್ಡ್ ವ್ಯಾಪ್ತಿಯಲ್ಲಿನ ಮುಖ್ಯ ರಸ್ತೆ ಗುಂಡಿಗಳನ್ನು ಮುಚ್ಚಲು ಕೂಡಲೆ ಕಾರ್ಯಾಚರಣೆ ಹೆಚ್ಚಿಸಲು ಸೂಚಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಫುಟ್ ಪಾತ್ ಒತ್ತುವರಿಯನ್ನು ತೇರೆವುಗೊಳಿಸಲು ಕ್ರಮ ಬದ್ದವಾದ ವೇಳಾಪಟ್ಟಿಯೊಂದಿಗೆ ಕಾರ್ಯಾಚರಣೆ ನಡೆಸಲು ಸೂಚಿಸಿದರು.
3. ವಾರ್ಡ್ ವ್ಯಾಪ್ತಿಯ ಕಾವೇರಿನಗರ ಖಾಲಿ ಜಾಗದಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಿಸಲು ಸಾರ್ವಜನಿಕರು ವಾರ್ಡ್ ಅಭಿಯಂತರರಿಗೆ ತಿಳಿಸಿದರು ಹಾಗೂ ಅಭಿಯಂತರರು ಸಕರಾತ್ಮಕಪ್ರತಿಕ್ರಿಯೆ ನೀಡಿದರು
4. ವಾರ್ಡ್ ವ್ಯಾಪ್ತಿಯಲ್ಲಿ ನಾಮಫಲಕಗಳಲ್ಲಿ ಹೆಸರುಗಳು ತಪ್ಪಾಗಿ ಮುದ್ರಣವಾಗಿದ್ದು ಕೂಡಲೆ ಸರಿಪಡಿಸಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವಂತಹ ಮೊದಲ ಎರಡು ಸಮಸ್ಯೆಗಳು ಈಗಾಗಲೆ ಕಾರ್ಯಾಚರಣೆ ಪ್ರಾರಂಭವಾಗಿದ್ದು ಪೂರ್ಣಗೊಳಿಸಲು ಸಮಯ ಬೇಕಾಗಿರುತ್ತದೆ ಎಂದು ತಿಳಿಸಿದರು.**

➢ **ಘನತ್ಯಾಜ್ಯ ಇಲಾಖೆಗೆ ಸಂಬಂದಿಸಿರುವುದು**

1. ವಾರ್ಡ್ ವ್ಯಾಪ್ತಿಯಲ್ಲಿ ಅಟೋ ಟಿಪ್ಪರ್‌ನಲ್ಲಿ ಸೇಕರಿಸಿದ ಕಸವನ್ನು ಕಾಂಪಾಕ್ಟರ್‌ನಲ್ಲಿ ತುಂಬಿಸಿತ್ತುರಿವ ಜಾಗವನ್ನು ಕೂಡಲೆ ಬದಲಿಸಿ, ರೈಲ್ವ ಟ್ರಾಕ್ ಬದಲಿಗೆ ಇರುವ ಜಾಗವನ್ನು ಖಾಲಿ ಸ್ವಚ್ಚಗೋಳಿಸಿ ಉಪಯೋಗಿಲು ಸೂಚಿಸಿದರು.

ಕ್ರಮ : ಕಿರಿಯ ಆರೋಗ್ಯ ಪರೀವಿಕ್ಷಕರು ಸಕಾರಾತ್ಮಕ ಪ್ರತಿಕ್ರಿಯೆ ನೀಡಿದರು.

➢ **ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಇಲಾಖೆಗೆ ಸಂಬಂದಿಸಿರುವುದು**

1. ವಾರ್ಡ್ ವ್ಯಾಪ್ತಿಯಲ್ಲಿ ಕಾವಲ್‌ಬೈರಸಂದ್ರ ಬಸ್‌ನಿಲ್ದಾಣ ತುಂಬಾ ದೂರವಾಗಿದ್ದು ಬಸ್‌ಗಳು ಎಲ್.ಆರ್.ಬಂಡೆ ಬಸ್‌ನಿಲ್ದಾಣದಿಂದ ಹೆಚ್.ಬಿ.ಆರ್ ಲೇಔಟ್ ಮುಖಾಂತರ ಸಂಚರಿಸಲು ಸಾರ್ವಜನಿಕರಿಂದ ಬೇಡಿಕೆ ಇದ್ದು ಪ್ರಸ್ತಾಪವನ್ನು ಈ ಸಭೆ ಮುಖಾಂತರ ತಮ್ಮ ಗಮನಕ್ಕೆ ತರಲಾಗಿದು.

➢ **ಕಂದಾಯ ಇಲಾಖೆಗೆ ಸಂಬಂಧಿಸಿರುವುದು**

1. **ವಾಡ್ ವ್ಯಾಪ್ತಿಯಲ್ಲಿ ಹೆಚ್.ಬಿ.ಆರ್ ಲೇಔಟ್‌ನಲ್ಲಿ ಇರುವ ಜಾಗಗಳಿಗೆ ಸೈಟ್ ಸಂಖ್ಯೆಗಳು ತಪ್ಪಾಗಿ ನೀಡಿರುವುದು ಹಾಗೂ ಖಾಲಿ ಇರುವ ಜಾಗಳಲ್ಲಿ ಕಟ್ಟಡಗಳನ್ನು ನಿರ್ಮಾಣ ಮಾಡಿದರು ಕಂದಾಯ ದಾಖಲೆಗಳಲ್ಲಿ ಖಾಲಿ ಇನ್ನೂ**

ಖಾಲಿ ಇದೆ ಎಂದು ನೋದಂಣಿಯಾಗಿದ್ದು ಕಂಡುಬಂದಿದ್ದು ಕೂಡಲೆ ಈ ಸಮಸ್ಯೆ ಪರಿಹರಿಸಲು ಈ ಸಭೆ ಮುಖಾಂತರ ಸೂಚಿಸಲಾಯಿತು.

➢ **ಪೊಲೀಸ್ ಇಲಾಖೆಗೆ (ಸಿವಿಲ್) ಸಂಬಂದಿಸಿರುವುದು**

1. ವಾರ್ಡ್ ವ್ಯಾಪ್ತಿಯಲ್ಲಿ ಗಾಂಜಾ ಸೇವನೆ, ಮದ್ಯ ಕುಡಿಯುವುದು, ಕಳ್ಳರ ಹಾವಳಿ ಹೆಚ್ಚಾಗಿ ಕಂಡುಬಂದಿದ್ದು ಪೊಲೀಸ್ ಇಲಾಖೆ ಸಭೆಗೆ ಹಾಜಾರಾದೆ ಇರುವ ಕಾರಣದಿಂದ ಮುಂದಿನ ಸಭೆಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಕೆಳಿಸಿಕೊಳ್ಳಲು ತಪ್ಪದೆ ಸಭೆಗೆ ಹಾಜರಾಲು ಸೂಚಿಸಿದೆ.

➢ **ಪೊಲೀಸ್ ಇಲಾಖೆಗೆ (ಟ್ರಾಫಿಕ್) ಸಂಬಂದಿಸಿರುವುದು**

1. ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ವಾಹನಗಳ ನೀಲುಗಡೆ, ನಿರ್ಜೀವವಾದ ವಾಹನಗಳ (Dead Vehical) ತೆರುವುಗೊಳಿಸುದು...ಇತರೆ ಸಮಸ್ಯೆಗಳು ಹಾಲಿಸಲು ಪೊಲೀಸ್ ಇಲಾಖೆ ಸಭೆಗೆ ಹಾಜಾರಾದೆ ಇರುವ ಕಾರಣದಿಂದ ಮುಂದಿನ ಸಭೆಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಕೆಳಿಸಿಕೊಳ್ಳಲು ತಪ್ಪದೆ ಸಭೆಗೆ ಹಾಜರಾಲು ಸೂಚಿಸಿದೆ.

➢ **ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸಿರುವುದು**

1. ವಾರ್ಡ್ ವ್ಯಾಪ್ತಿಯಲ್ಲಿನ ರಾಘವೇಂದ್ರ ಸ್ವಾಮಿ ಎದರು ವಾಟರ್ ಲೇನ್ ಹಾಕಲು ಸೂಚಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಹೆಚ್.ಬಿ.ಆರ್ ಲೇಔಟ್‌ನಲ್ಲಿ ವಾಟರ್ ಬೀಲ್ ಸರಿಯಾಗಿ ನೀಡುತಿಲ್ಲ ಕೂಡಲೆ ಪರಿಶ್ಕರಿಸಲು ಸೂಚಿಸಿದರು.

ಕ್ರಮ : **ಈ ಮೇಲೆ ಸೂಚಿಸಿರುವಂತಹ ಸಮಸ್ಯೆಗಳನ್ನು ಪರಿಹರಿಸುವಂತೆ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.**

ಈ ಎಲ್ಲಾ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಂಬಂದಪಟ್ಟವರಿಗೆ ಸೂಚಿಸುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದೆ.

**ಸದಸ್ಯ ಕಾರ್ಯದರ್ಶಿ ವಾರ್ಡ್ –32**

<u>ಪ್ರತಿಗಳನ್ನು:</u>

1. ಮಾನ್ಯ ಆಡಳಿತಾಧಿಕಾರಿರವರ ಅಪ್ತ ಶಾಖೆಗೆ ಸಲ್ಲಿಸಿ ಆಡಳಿತಾಧಿಕಾರಿರವರ ಗಮನಕ್ಕೆ ತರಲು ಕೊರಿದೆ.
2. ಮಾನ್ಯ ಆಯುಕ್ತರುರವರ ಅಪ್ತಶಾಖೆಗೆ ಸಲ್ಲಿಸಿ ಆಯುಕ್ತರವರ ಗಮನಕ್ಕೆ ತರಲು ಕೊರಿದೆ
3. ಮಾನ್ಯ ವಲಯ ಆಯುಕ್ತರುರವರ ಅಪ್ತಶಾಖೆಗೆ ಸಲ್ಲಿಸಿ ಆಯುಕ್ತರವರ ಗಮನಕ್ಕೆ ತರಲು ಕೊರಿದೆ.
4. ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರ ಅಪ್ತಶಾಖೆಗೆ ಸಲ್ಲಿಸಿ ಅಯುಕ್ತರವರ ಗಮನಕ್ಕೆ ತರಲು ಕೊರಿದೆ.
5. ಮುಖ್ಯ ಅಭೀಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಜಿ.ಹಳ್ಳಿ ಉಪ-ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ) ಪುಲಕೇಶಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ಕಂದಾಯ ಅಧಿಕಾರಿ (ಕೆ.ಜಿ. ಹಳ್ಳಿ) ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ನೇತಾಜಿ ರಸ್ತೆ, ರವರ ಮಾಹಿತಿಗಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರ ಮಾಹಿತಿಗಾಗಿ ಸಲ್ಲಿಸಿದೆ.
12. ಹಿರಿಯ ವೈದ್ಯಾಧಿಕಾರಿಗಳು (ಪುಲಿಕೇಶಿನಗರ) ರವರ ಮಾಹಿತಿಗಾಗಿ ಸಲ್ಲಿಸಿದೆ
13. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ಕೆ.ಜಿ.ಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.

14. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ಆರ್.ಟಿ.ನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
15. ಪೊಲೀಸ್ ಇನ್ಸ್‌ಪೆಕ್ಟರ್ (ಟ್ರಾಫಿಕ್) ಕೆ.ಜಿ.ಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
16. ಪೊಲೀಸ್ ಇನ್ಸ್‌ಪೆಕ್ಟರ್(ಟ್ರಾಫಿಕ್) ಆರ್.ಟಿ.ನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
17. ಸಹಾಯಕ ನಿರ್ದೇಶಕರು (ಪೂರ್ವ) ಪಶು ಪಾಲನೆ ಇಲಾಖೆ ರವರ ಮಾಹಿತಿಗಾಗಿ ಸಲ್ಲಿಸಿದೆ.
18. ವಲಯ ಅರಣ್ಯಾಧಿಕಾರಿಗಳು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
19. ವ್ಯವಸ್ಥಾಪಕ ನಿರ್ದೇಶಕರು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ರವರ ಮಾಹಿತಿಗಾಗಿ ಸಲ್ಲಿಸಿದೆ
20. ಕಛೇರಿ ಪ್ರತಿ.